ಕಾರ್ಪೆಟ್. ಬಸವಳಿದು ಬಾಡಿದ್ದ ಹೂಮಾಲೆಗಳು. ಬಿದ್ದು, ಕಾಲಿಗೆ ಸಿಕ್ಕಿ ಆರ್ತನಾದ ಹೊರಡಿಸುತ್ತಿದ್ದ ಪ್ಲಾಸ್ಟಿಕ್ ಲೋಟಗಳು. ನೊಣಗಳು... ಸೊಳ್ಳೆಗಳು... ಅಪ್ಪ ...ಅಮ್ಮ... ತಮ್ಮ...

'ಇಷ್ಟು ಒರಟಾಗಿ ಮಾತಾಡಿದರೆ ಹೇಗೆ? ... ವೀಣಾಗೆ ಬರಬೇಕು ಅಂತ ತುಂಬಾ ಆಸೆ ಇತ್ತು... ಅತ್ತಿಗೆ ಒಮ್ಮೆಯೂ ಬಂದಿಲ್ಲ... ನಾವೇ ಎಷ್ಟು ಬಾರಿ ಹೋಗುವುದು... ನೀವು ಈ ಬಾರಿ ಬರ್ತಾ ಅವರನ್ನು ಕರೆದುಕೊಂಡು ಬನ್ನಿ ... ಅಂತ ಹೇಳಿದ್ದಾಳೆ' ತಮ್ಮನ ನುಡಿ...

'ಓಹೋ... ಗುಡ್ ಅವಳಿಗಾದರೂ ಕೊಂಚ ಆತ್ಮಗೌರವ ಇದೆಯಲ್ಲ...! ನನ್ನ ಕರೆದುಕೊಂಡು ಹೋಗುವಷ್ಟು ಧೈರ್ಯ ಬಂದಿದೆಯೇ ನಿಮಗೆ?' ಅತ್ತೆ, ಗಂಡ, ಮಾವ ಅವರಿಗಿಂಥ ಇವರ ಮೇಲೆ ಹೆಚ್ಚು ಕೋಪ...

'ನಿನ್ನ ಮಾತೇ ಅರ್ಥವಾಗೊಲ್ಲ. ನಿನ್ನ ಬರಬೇಡ ಅಂತ ನಾವು ಯಾವಾಗ ಹೇಳಿದೀವಿ?... ನಿನ್ನ ಸಂಸಾರ ಚೆನ್ನಾಗಿರಲಿ ಅಂತ ಬುದ್ಧಿ ಹೇಳಿದ್ವಿ... ಅದು ತಪ್ಪಾ?' ಅಪ್ಪ ಬಾಯಿಬಿಟ್ಟರು.

'ನನ್ನ ಸಂಸಾರ ಚೆನ್ನಾಗಿ ಇರಬೇಕು ಅಂದರೆ ನೀವು ಬುದ್ಧಿ ಹೇಳ ಬೇಕಾಗಿರುವುದು ನಿಮ್ಮ ಅಳಿಯನಿಗೆ. ನನಗಲ್ಲ... ಜೊತೆಗೆ ತಪ್ಪು ಮಾಡಿದಾಗ ಬುದ್ಧಿ ಹೇಳುವ ಅಧಿಕಾರ ಇರುವುದು ಕಷ್ಟ ಎಂದು ಬಂದಾಗ ಆಶ್ರಯ ಕೊಡುವ ಮನೋಭಾವ, ಜವಾಬ್ದಾರಿ ಇದ್ದವರಿಗೆ ಅಷ್ಟೇ... ನನ್ನ ತೌರು ಸತ್ತು ಐದು ವರ್ಷಗಳಾದವು...! ನೀವು ಹಳ್ಳಿ ಮನೆ ಕುಟುಂಬದ ಬೀಗರಷ್ಟೇ.'

ಗದ್ಗದಿತಗೊಳ್ಳುತ್ತಿದ್ದ ದನಿಯನ್ನು ಹತೋಟಿಗೆ ತಂದುಕೊಂಡು ಮನೆಯೊಳಗೆ ನಡೆದೆ.

'ಮೇಡಂ... ಸ್ವಲ್ಪ ಸ್ವೀಟ್ಸ್ ಪ್ಯಾಕ್ ಮಾಡಿಕೊಟ್ರೆ ವಿಶ್ವಾಸ್ ಅಣ್ಣನಿಗೆ ಕೊಟ್ಟು ಬರ್ತೀನಿ... ನೀವು ಅವರನ್ನ ಕರೀಲೇ ಇಲ್ಲ'

ನರಹರಿ ಹಿಂದೆ ಓಡಿ ಬಂದಾಗ ಅವನತ್ತ ತಿರುಗಿದೆ.

'ವಿಶ್ವಾಸ್ ಅಣ್ಣ?' ಅವನತ್ತ ಕಣ್ಣರಳಿಸಿದೆ.

'ಸ್ವಂತ ಅಣ್ಣನಿಗಿಂಥ ಹೆಚ್ಚು ಪ್ರೀತಿ ತೋರಿಸ್ತಾರೆ... ಹಾಗೆ ನೋಡಿದರೆ ವಯಸ್ಸಿನಲ್ಲಿ ನನಗಿಂತ ಕಿರಿಯರೇನೋ ಅವರು'. ನರಹರಿಯ ಮುಖದ ತುಂಬಾ ನಗು.

ಉಗುಳು ನುಂಗಿದೆ... ಬೆಳಗ್ಗೆಯೆಲ್ಲಾ ಮನೆಯಲ್ಲಿ ಭರ್ತಿ ಜನ... ಮುಖ್ಯಮಂತ್ರಿಗಳು, ಅವರ ಹೆಂಡತಿ... ಇನ್ಯಾವುದೋ ಮಂತ್ರಿಗಳು... ಅವರಿಗಾಗಿ ಮತ್ತಷ್ಟು ಜನ... ಮಂತ್ರ, ಹೋಮ, ಹೊಗೆ, ಗಲಾಟೆ... ಇಷ್ಟೆಲ್ಲದರ ಮಧ್ಯೆ ಅವನ ನೆನಪು... ಏನಾಗಿದೆ ನನಗೆ!

'ಇಲ್ಲಿ ವಿಶ್ವಾಸ್ ಗೆ ಯಾರ ಪರಿಚಯವೂ ಇಲ್ಲವಲ್ಲ, ಹಾಗಾಗಿ ಕರೆಯಲಿಲ್ಲ' ಮೆಲ್ಲನೆ ಹೇಳಿದೆ.

'ಅವರಿಗೇನು ಮೇಡಂ... ಪರಿಚಯಸ್ಥರು ಇರಬೇಕು ಎಂದೇನಿಲ್ಲ... ಕಲ್ಲಬಂಡೆಯನ್ನೂ ಮಾತಾಡಿಸಿ ಕರಗಿಸಿಬಿಡ್ತಾರೆ, ಹೋಗಲಿ ಬಿಡಿ. ಸ್ವೀಟ್ಸ್ ಕೊಡಿ. ಕ್ಲಾಸ್ ಮುಗಿಯೋ ಹೊತ್ತಿಗೆ ಹೋಗಿ ಕೊಟ್ಟು ಬರ್ತೀನಿ.'

'ನಾನೇ ಹೋಗ್ತೀನಿ... ಸೂರಿಗೆ ಗಾಡಿ ತೆಗೆಯೋಕ್ಕೆ ಹೇಳು'

'ನಾವು ಹೊರಡ್ತೀವಿ...' ಹಿಂದೆ ತಿರುಗಿದೆ. ಅಮ್ಮ, ಅಪ್ಪ... ಅತ್ತ ಕುರುಹಾಗಿ ಅಮ್ಮನ ಕೆನ್ನೆಗಳು ತೇವಗೊಂಡಿದ್ದವು. ಸದಾ ನಗುತ್ತಿರುತ್ತಿದ್ದ ಅಪ್ಪನ ಮುಖ ಬಿಗಿದುಕೊಂಡಿತ್ತು. ನಾಗೇಂದ್ರ ಗೇಟಿನ ಬಳಿ ನಿಂತಿದ್ದ.

'ಅತ್ತೆಗೆ ಹೇಳಿ ಹೊರಡಿ...'

'ನಮಗೆ ನಿನ್ನ ಮೇಲೆ ಯಾವ ದ್ವೇಷವೂ ಇಲ್ಲ... ಕೋಪ ಏಕೆ? ನಿಮ್ಮತ್ತೆ...'

'ಏನು? ಏನು ನಮ್ಮತ್ತೆ?...' ರೇಗಿತು.

ರೇಗಬಾರದು, ರೇಗಿ ಏನು ಪ್ರಯೋಜನವಿಲ್ಲ... ಆದರೇ ತಾವೇ ಸರಿ ಎಂದೇ ವಾದಿಸುವ ಇವರನ್ನು ನೋಡಿದರೆ ಒಳಗಿನಿಂದ ಉರಿದುಕೊಂಡು ಬರುತ್ತೆ...

'ಅಲ್ಲಾ ಕಣೇ... ದೊಡ್ಡವರು..' ಅಮ್ಮ ತೊದಲಿದರು.

'ಏನು ದೊಡ್ಡವರು? ... ದುಡ್ಡು ಕಾಸು ದಂಡಿಯಾಗಿ ಇದ್ದರೆ ದೊಡ್ಡವರೇ? ವಯಸ್ಸಾಗಿ ಬಿಟ್ಟರೆ ದೊಡ್ಡವರೇ?... ಮನಸ್ಸಿನಿಂದ, ನಡವಳಿಕೆಯಿಂದ ದೊಡ್ಡವರಾಗಬೇಕಲ್ಲವೇ ... ಬಿಡಿ... ನಾನು ಏನು ಹೇಳಿದರೂ ನಿಮಗೆ ಅರ್ಥವಾಗೊಲ್ಲ..'

'ಸಂಸಾರ ಮುಖ್ಯ ಅದಕ್ಕೆ...'

'ಅದಕ್ಕೆ...?... ನಾಲ್ಕು ಮಂದಿ ನಡತೆಗೆಟ್ಟವರ ಜೊತೆ ಮಲಗಿ ಬರ್ತಾರೆ... ನಾನು ಗಲಾಟೆ ಮಾಡ್ತೀನಿ... ನಮ್ಮತ್ತೆ ಬಂದು ಬುದ್ಧಿ ಹೇಳಿ ಅಂತ ನಿಮಗೆ ಅಂತಾರೆ... ಯಾರಿಗೆ ಹೇಳಬೇಕು ಬುದ್ಧಿ ಎಂದು ಕೂಡ ಯೋಚಿಸದೆ ಬಂದು ನನಗೆ ಬುದ್ಧಿ ಹೇಳ್ತೀರಿ... ನಿಮ್ಮ ಅಳಿಯ ರಾಜಕೀಯ ಸೇರಿ .. ದುಡ್ಡು ಪೋಲು ಮಾಡ್ತಾರೆ.. ನಾನು ಗಲಾಟೆ ಮಾಡ್ತೀನಿ.. ಏನು? ಯಾಕೆ?... ನಿಮಗೆ ವಿವೇಚನೆ ಇಲ್ಲವೇ?... ತಪ್ಪು, ಸರಿಗಳ ತುಲನೆ ಮಾಡಲು ಬರುವುದಿಲ್ಲವೇ? ಸಂಸಾರ ಮುಖ್ಯ ನನಗೂ ಗೊತ್ತು. ಆದರೆ ಅಧಿಕಾರ, ದುಡ್ಡು ಆಸ್ತಿಯಿಂದ ಅಷ್ಟೇ ಸಂಸಾರದಲ್ಲಿ ಸುಖವಿರೋಲ್ಲ... ಸುಖಕ್ಕೆ ಪ್ರೀತಿ, ವಿಶ್ವಾಸ ಮುಖ್ಯ ಎಂದು ತಿಳಿದಿಲ್ಲವೇ ನಿಮಗೆ? ಎಲ್ಲದಕ್ಕೂ ನಂಗೇ ಬುದ್ಧಿ ಹೇಳಲು ಬರ್ತೀರಲ್ಲ... ಯಾಕೆ? ನೀವು ಬೆಳೆಸಿರುವ ಮಗಳು ಹೇಗೆ ಎಂದು ಗೊತ್ತಿಲ್ಲವೇ ನಿಮಗೆ?'

'ಅಲ್ಲಾ....'

'ಸಾಕು... ಪ್ಲೀಸ್ ಸಾಕು. ಇಷ್ಟು ವಯಸ್ಸಾದ ಮೇಲೂ, ನೀವೂ ಇಷ್ಟು ಬಾರಿ ಬುದ್ಧಿ ಹೇಳಿದ ಮೇಲೂ ನಂಗೆ ಬುದ್ಧಿ ಬಂದಿಲ್ಲ ಅಂದರೆ ಮುಂದೆ ಬರೋದೂ ಇಲ್ಲ.. ವ್ಯರ್ಥ ಕಂಠ ಶೋಷಣೆ'

'ನನ್ನ ಮಾತು...'

'ಅಮ್ಮ ಪ್ಲೀಸ್...' ದನಿಯನ್ನು ಹತೋಟಿಯಲ್ಲಿ ಇಟ್ಟುಕೊಂಡು ಸರಸರನೆ ಒಳಗೆ ನಡೆದೆ.

ಅಡಿಗೆ ಮನೆಯಲ್ಲಿ ಅಡಿಗೆಯವರು ತಂದಿರಿಸಿದ್ದ ಸಿಹಿಗಳನ್ನು ಕೈಗೆ ಸಿಕ್ಕ ಡಬ್ಬಿಯಲ್ಲಿ ತುಂಬಿಸಿ, ಆ ಡಬ್ಬಿಯನ್ನು ಕವರೊಂದಕ್ಕೆ ಹಾಕಿಕೊಂಡು ಆಚೆ ಬಂದೆ. ಹಾಲಿನ ಸೋಫಾದ ಮೇಲೆ ಕುಳಿತಿದ್ದರು ಅಪ್ಪ ಅಮ್ಮ...

'ನಿಮ್ಮತ್ತೆಗೆ ಹೇಳಿ ಹೊರಡ್ತೀವಿ...'

'ಹಾಗೆ ಮಾಡಿ...'

'ನೀನು ಎಲ್ಲಿಗಾದರೂ ಹೋಗ್ತಿದಿಯಾ?'

'ಹೂಂ...'

ನಾವು ಹೇಳಿ ಹೋಗಲು ಕಾಯ್ತಿದೀವಿ ಅಂತ ಅವರಿಗೆ ಹೇಳಬೇಕಿತ್ತು.

ಅವರತ್ತ ಕಣ್ಣರಳಿಸಿದೆ. ಅವಮಾನ ಎನ್ನಿಸುವುದಿಲ್ಲವೇ.

'ಕೆಲಸದವಳ ಕಂಡರೆ ನೀವೇ ಹೇಳಿ ಕಳಿಸಿ... ಇಲ್ಲದಿದ್ದರೆ ಸುಮ್ಮನೆ ಹೊರಟು ಬಿಡಿ... ಬಂದವರು ಇನ್ನೂ ಇದ್ದಾರೆ.. ಹೊರಡ್ತಾ ಇದ್ದಾರೆ.. ಹೇಳಿ ಹೋಗಲು ಕಾಯ್ತಾರೆ ಎಂದು ಅವರಿಗೂ ಗೊತ್ತು... ಆದರೂ ಕೋಣೆಗೆ ಹೋಗಿ ಬಾಗಿಲು ಹಾಕಿಕೊಂಡಿದ್ದಾರೆ ಅಂದರೆ ತುಂಬಾ ಸುಸ್ತಾಗಿರಬೇಕು ಅಥವಾ ಉಡಾಫೆ ಇರಬೇಕು... ಇಲ್ಲೇ ದೇವರ ಕೋಣೆಯ ಪಕ್ಕದ ಕೋಣೆ ಅಜ್ಜಿಯದು. ಅಜ್ಜಿಗೆ ಹೇಳಿ ಹೊರಡಿ. ಅಷ್ಟೇ.'

ಹೊರ ನಡೆದೆ.

ಕಾರಿನ ಹಿಂದಿನ ಬಾಗಿಲು ತೆರೆದು ಹಿಡಿದುಕೊಂಡು ನಿಂತಿದ್ದ ಸೂರಿ...

'ನೀನು ಹತ್ತು ನಾನು ಬಾಗಿಲು ಹಾಕುತ್ತೇನೆ..'

'ಕೂತ್ಕೊಳ್ಳಿ ಮೇಡಂ..'

ನನಗಾಗಿ ಬಾಗಿಲು ತೆರೆದು, ನಾನು ಕುಳಿತ ಮೇಲೆ ಹಾಕಿ. ನಂತರ ತಾನು ಡ್ರೈವರ್ ಸೀಟ್‌ನಲ್ಲಿ ಕುಳಿತು ಕಾರ್ ಸ್ಟಾರ್ಟ್ ಮಾಡಿ ಹೊರಡುವುದು ಅವನ ಅಭ್ಯಾಸ... ಅಭ್ಯಾಸ ಬಿಡುವುದು ಸುಲಭವಲ್ಲ. ಒಂದು ಕಾರಿನ ಬಾಗಿಲು ಹಾಕಿ ತೆರೆಯುವ ಒಂದು ಅಭ್ಯಾಸವನ್ನು ಬಿಡುವುದೇ ಇಷ್ಟು ಕಷ್ಟ.

ಶಾಲೆಯ ಬಳಿ ಬರುವ ವೇಳೆಗೆ ಎಲ್ಲಾ ಹೋಗಿಯಾಗಿತ್ತು... ಮೀರಾ ಕೋಣೆಯ ಬೀಗ ಹಾಕುತ್ತಿದ್ದಳು.

ವಿಶ್ವಾಸ್ ಮೊಬೈಲಿನಲ್ಲಿ ಯಾರೊಂದಿಗೋ ಮಾತಾಡುತ್ತಾ ಮತ್ತೊಂದು ಕೈಯನ್ನು ಗಾಳಿಯಲ್ಲಿ ಆಡಿಸುತ್ತಾ ನಿಧಾನವಾಗಿ ನಡೆದು ಬರುತ್ತಿದ್ದ... ಗಮನವೆಲ್ಲಾ ಮಾತಿನ ಮೇಲೆ ಇದ್ದಿದ್ದರಿಂದ ನನ್ನ ಗಮನಿಸಲೇ ಇಲ್ಲ ಅವನು.

'ವಿಶ್ವಾಸ್...' ಎಂಟು ಹೆಜ್ಜೆ ದೂರದಲ್ಲಿ ಇದ್ದಾಗ ಮೆಲ್ಲನೆ ಕರೆದೆ.

'ಅರೆ ನೀವು...' ಅಚ್ಚರಿ, ಸಂತಸದಿಂದ ಅವನ ಮುಖವರಳಿತು.

'ಆಮೇಲೆ ಫೋನ್ ಮಾಡ್ತೀನಿ..' ಮೊಬೈಲನ್ನು ಜೇಬಿಗೆ ಸೇರಿಸಿದ.

'ಏನ್ರೀ ಈ ಪಾಮರನ ನೆನಪು ಈಗ ಬಂತಾ?... ಕರೆದಿದ್ರೆ.. ನಾನೂ ಬಂದು ಊಟ ಮಾಡ್ತಿದ್ದೆ... ನಿಮ್ಮ ಯಜಮಾನರ ಕೈ ಕುಲುಕಿ ಆಲ್ ದಿ ಬೆಸ್ಟ್ ಹೇಳ್ತಿದ್ದೆ... ಮುಖ್ಯಮಂತ್ರಿಗಳು ಬಂದಿದ್ರಂತೆ!.... ಅವರಿಗೆ ನಾನು ಸಿನಿಮಾ ನಟಿ ಲತಾ ಅವರ ಮಗ ಅಂತ ಪರಿಚಯ ಮಾಡಿಕೊಳ್ತಾ ಇದ್ದೆ... ತನ್ನ ಕೈಗೆ ಸಿಗದ ನಟಿಯ ಊಪ್ಸ್... ಸಾರಿ ಯಾಕ್ರಿ ಕರೀಲಿಲ್ಲ?'